**ದಿನಾಂಕಃ 16.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ಆ ದಿನ ನಾನು ಹೋಗುತ್ತಿದ್ದ ದ್ವಿಚಕ್ರ ವಾಹನ ನನಗೆ ಸೇರಿದ್ದು ಮತ್ತು ಅದನ್ನು ನಾನೇ ಚಾಲನೆ ಮಾಡುತ್ತಿದ್ದೆ. ಆ ದಿನ ನಾನು ಕಾಟಮ್ಮನಗೇಟ್ ಕಡೆಯಿಂದ ಹೊಸಕೋಟೆಗೆ ಹೋಗುತ್ತಿದ್ದೆ. ಅಪಘಾತವಾದ ರಸ್ತೆ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಇರುತ್ತದೆ ಎಂದರೆ ಸರಿ. ಆದರೆ ಆ ದಿನ ಹೆಚ್ಚಿ ನ ವಾಹನ ದಟ್ಟಣೆ ಇರಲಿಲ್ಲ. ಆ ದಿನ ನಾನು ಅಪಘಾತವಾದ ಸ್ಥಳದಲ್ಲಿ ಯೂ ತಿರುವು ತೆಗೆದುಕೊಳ್ಳುತ್ತಿದ್ದೆ ಎಂದರೆ ಸಾಕ್ಷಿಯು ತಿರುವು ತೆಗೆದುಕೊಳ್ಳುವ ಮುಂಚೆ ಅಪಘಾತವಾಗಿದೆ ಎಂದು ನುಡಿಯುತ್ತಾರೆ. ಆ ದಿನ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮೊಬೈಲ್ ನಲ್ಲಿ ಮಾತನಾಡಿಕೊಂಡು ಚಾಲನೆ ಮಾಡುತ್ತಿದ್ದು, ವಾಹನ ಬರುವುದನ್ನು ಗಮನಿಸದೇ ಯೂ ತಿರುವು ತೆಗೆದುಕೊಂಡ ಕಾರಣ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆಪಾದಿತ ಕಾರಿನ ಚಾಲಕನ ತಪ್ಪಿ ನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ನಾನು ಬಿ.ಕಾಂ ಪಧವೀದರ. ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಹೆಚ್.ಪಿ.ಸಿ.ಎಲ್ ಬಂಕ್ ನಲ್ಲಿ ಮ್ಯಾನೇಜರ್ ಕೆಲಸ ಮಾಡುತ್ತಿದ್ದೆ. ನನ್ನ ಕೆಲಸ ಮತ್ತು ಆದಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಷ್ಟು ಆದಾಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

ಚಿಕಿತ್ಸೆಗೆ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳಿರುವಷ್ಟು ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಉಂಟಾದ ಗಾಯಗಳು ವಾಸಿಯಾವಗಿವೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಬಗ್ಗೆ ದೂರನ್ನು ನನ್ನ ತಂದದೆ ನೀಡಿರುತ್ತಾರೆ. ನನ್ನ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಚಾಲನಾ ಪರವಾನಗಿಯನ್ನು ಹೊಂದಿದ್ದೇನೆ. ನನ್ನ ವಾಹನದ ದಾಖಲಾತಿಗಳನ್ನು ಮತ್ತು ಪರವಾನಗಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ತಪ್ಪಿ ನಿಂದ ಅಪಘಾತವಾದ ಕಾರಣ 2ನೇ ಎದುರುದಾರರು ಪರಿಹಾರ ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

1ನೇ ಎದುರುದಾರರ ಪರ ಮಾನ್ಯ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**